ಪ್ರಸನ್ನ ವೆಂಕಟದಾಸರ ಮೂರ್ತಿ ಸ್ಥಾಪನೆಗೆ ಪ್ರಸ್ತಾಪ

ಬಾಗಲಕೋಟೆ ನವನಗರದ ಪ್ರಸನ್ನ ವೆಂಕಟ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ರೇಖಾ ಕಾಖಂಡಕಿಯವರ ಶ್ರೀ ಪ್ರಸನ್ನ ವೆಂಕಟ ವಿಜಯ ಕೃತಿಯನ್ನು ಡಾ.ಅರಳು ಮಲ್ಲಿಗೆ ಪಾರ್ಥಸಾರಥಿ ಬಿಡುಗಡೆ ಮಾಡಿದರು. ಆನಂದ ಝುಂಜರವಾಡ, ರಘೋತ್ತಮಾಚಾರ್ಯ ನಾಗಸಂಪಗಿ, ದ್ರುವಾಚಾರ್ಯ ಕಾಖಂಡಕಿ, ಅನಂತ ಕುಲಕರ್ಣಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಬಾಗಲಕೋಟೆ, 18– ಕರ್ನಾಟಕದ ಸಂಸ್ಕೃತಿಗೆ ಮುಳುಗಡೆಯಾಗುತ್ತಿರುವ ಘಟಪ್ರಭೆ ನೀಡಿರುವ ಕಾಣಿಕೆ ಅದ್ಭುತವಾಗಿದೆ. ಇದು ಮಾಸದಂತೆ ಬರುವ ಪೀಳಿಗೆಗೂ ಶಾಶ್ವತವಾಗಿರಿಸುವ ಪ್ರಯತ್ನ ಅಗತ್ಯವಾಗಿದ್ದು, ನವನಗರದಲ್ಲಿ ಪ್ರಸನ್ನ ವೆಂಕಟದಾಸರ ಶಿಲಾ ಮೂರ್ತಿಯನ್ನು ಸ್ಥಾಪಿಸಿ ಅವರ ಕೃತಿಗಳನ್ನು ಸಂರಕ್ಷಿಸುವ ಪ್ರಯತ್ನಕ್ಕೆ ಚಾಲನೆ ನೀಡಬೇಕೆಂದು ದಾಸ ಸಾಹಿತ್ಯದ ವಿಧ್ವಾಂಸ, ಸಂಶೋಧಕ ಡಾ.ಅರಳು ಮಲ್ಲಿಗೆ ಪಾರ್ಥಸಾರಥಿ ಸಲಹೆ ಮಾಡಿದರು.

ನವನಗರದ ಪ್ರಸನ್ನ ವೆಂಕಟ ಮಂಟಪದಲ್ಲಿ ಶನಿವಾರ ಸಂಜೆ ಹೆಸರಾಂತ ಸಾಹಿತಿ ಶ್ರೀಮತಿ ರೇಖಾ ಕಾಖಂಡಕಿ ಅವರ ಶ್ರೀ ಪ್ರಸನ್ನ ವೆಂಕಟ ವಿಜಯ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಪ್ರಸನ್ನ ವೆಂಕಟದಾಸರು ದಾಸ ಸಾಹಿತ್ಯಕ್ಕೆ ನೀಡಿದ ಕಾಣಿಕೆ ಅಮೋಘವಾಗಿದೆ, ಕನ್ನಡದ ಅವರ ಭಾಗವತ ಕೃತಿ ಲೋಕಕಲ್ಯಾಣದ ಅದ್ಭುತ ಗ್ರಂಥ, ಇಂತಹುದಕ್ಕೆ ನೆಲೆ ನೀಡಿದ ಬಾಗಲಕೋಟೆ ಘಟಪ್ರಭೆ ಸಂಸ್ಕೃತಿ ಮುಳುಗಡೆ ನಂತರ ನಶಿಸಿ ಹೋಗಬಾರದೆಂದರು. ಮೂಲ ಭಾಗವತವನ್ನು ಕನ್ನಡಕ್ಕೆ ರಾಜಗಾಂಭೀರ್ಯದಲ್ಲಿ ತಂದು ಕೊಟ್ಟ ಪ್ರಸನ್ನ ವೆಂಕಟದಾಸರು ದಾಸ ಸಾಹಿತ್ಯದ ಹಾಡಿನ ಹಕ್ಕಿ ಎಂದು ಬಣ್ಣಿಸಿದರು.

ಪ್ರಸನ್ನ ವೆಂಕಟದಾಸರ ಆರಾಧನಾ ಮಹೋತ್ಸವ ಬರಲಿರುವ ದಿನಗಳಲ್ಲಿ ಬೆಂಗಳೂರು, ಮೈಸೂರು, ಮುಂಬೈ, ದೆಹಲಿಯಲ್ಲಿಯೂ ಕೂಡ ನಡೆಯಲಿದೆ. 23 ರಿಂದ ನಡೆಯಲಿರುವ ಶ್ರೀಪಾದರಾಜರ ಕಾರ್ಯಕ್ರಮದಲ್ಲಿ ಪ್ರಸನ್ನ ವೆಂಕಟದಾಸರ ಕೃತಿಗಳಿಗಾಗಿಯೇ ಪ್ರತ್ಯೇಕ ಗೋಷ್ಠಿ ನಡೆಯುತ್ತಿರುವದು ಅವರು ಹೆಚ್ಚು ಪ್ರಸ್ತುತವಾಗುತ್ತಿರುವದಕ್ಕೆ ಕಾರಣ ಎಂದರು. ಈ ಕವಿಗೆ ಕವಿಗಳನ್ನು ಸೃಷ್ಟಿಸಿದ ಅನಂತ ಕುಲಕರ್ಣಿಯವರ ಸಂಗೀತ ಪ್ರತಿಭೆ ಅದ್ಭುತ ಎಂದರು. ಅಧ್ಯಯನ ಶೀಲರಿಗೆ ಮಾತ್ರ ಸೀಮಿತವಾಗಿರುವ ತತ್ವಶಾಸ್ತ್ರವನ್ನು ಶ್ರೀ ಸಾಮಾನ್ಯರಿಗೂ ತಿಳಿಯುವ ಭಾಷೆಯಲ್ಲಿ ಸರಳವಾಗಿ ರಚಿಸಿ ಅದರ ತಿರುಳು, ತತ್ವದ ಸಂಸ್ಕೃತಿಯನ್ನು ಆಡು ಭಾಷೆಯಲ್ಲಿ ರಚಿಸುವ ರೇಖಾ ಕಾಖಂಡಕಿಯವರ ಪ್ರಯತ್ನ ಪ್ರಸನ್ನ ವೆಂಕಟ ವಿಜಯದಲ್ಲಿ ಪ್ರಭಾವಿಯಾಗಿ ಮೂಡಿ ಬಂದಿದೆ, ಇಲ್ಲಿ ಘಟಪ್ರಭೆಯ ಪ್ರಭಾವಳಿಯನ್ನು ಪ್ರಭಾವಿಯಾಗಿ ಅನಾವರಣಗೊಳಿಸಿದ್ದಾರೆ ಎಂದರು.

ಪ್ರಸನ್ನ ವೆಂಕಟದಾಸರ ವೆಬ್ ಸೈಟ್ ಬಿಡುಗಡೆ ಮಾಡಿದ ಕವಿ ವಿಮರ್ಶಕ ಆನಂದ ಝುಂಜರವಾಡ ಅವರು ಭೂ ಪ್ರದೇಶದ ಮಮಕಾರ, ಅನುಭಾವಗಳನ್ನು ಕೃತಿಗೆ ಜೀವ ತಂದುಕೊಟ್ಟಾಗ ಅದು ಆ ಪ್ರದೇಶವನ್ನು ಶ್ರೀಮಂತಗೊಳಿಸುತ್ತದೆ. ಈ ನಿಟ್ಟಿನಲ್ಲಿ ರೇಖಾ ಕಾಖಂಡಕಿಯವರ ಪ್ರಯತ್ನ ಶ್ಲಾಘನೀಯ ಎಂದರು. ಪಂ. ರಘೋತ್ತಮಾಚಾರ್ಯ ನಾಗಸಂಪಗಿ ಉಪಸ್ಥಿತರಿದ್ದ ಸಮಾರಂಭದ ಅಧ್ಯಕ್ಷತೆಯನ್ನು ದಾಸರ ಮನೆತನದ ಹಿರಿಯರಾದ ದ್ರುವಾಚಾರ್ಯ ಕಾಖಂಡಕಿ ವಹಿಸಿದ್ದರು. ಶ್ರೀ ಪ್ರಸನ್ನ ವೆಂಕಟದಾಸರ ಆರಾಧನಾ ಸಮಿತಿ, ಸಂಸ್ಕೃತಿಕ ಹಾಗೂ ವಿಶ್ವಸ್ಥ ಮಂಡಳಿ, ಶ್ರೀ ಪ್ರಸನ್ನ ವೆಂಕಟ ಪ್ರಕಾಶನ ಸಂಸ್ಥೆಯ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಡಾ.ಸುಭಾಸ ಕಾಖಂಡಕಿ ಸ್ವಾಗತಿಸಿದರು. ಲೇಖಕಿ ರೇಖಾ ಕಾಖಂಡಕಿ ಕೃತಿ ರಚನೆಯ ಪ್ರೇರಣೆಯನ್ನು ಮೆಲಕು ಹಾಕಿದರು. ಪ್ರಹ್ಲಾದ ಕಾಖಂಡಕಿ ನಿರೂಪಿಸಿದರು. ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಬಿ.ಟಿ.ಲೋಕಾಪೂರ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಪ್ರಕಾಶ ಖಾಡೆ, ಹಣಮಂತ ತಾಸಗಾಂವಕರ, ಬಾಗಲಕೋಟೆ ಅರ್ಬನ್ ಬ್ಯಾಂಕ ಅಧ್ಯಕ್ಷ ಜಿ.ಆರ್.ಫಡ್ನಿಸ್, ವಿಜಯ ದೇಶಪಾಂಡೆ ಮತ್ತಿತರರು ಪಾಲ್ಗೊಂಡಿದ್ದರು. ಗಿರೀಶ ಕುಲಕರ್ಣಿ ವಂದಿಸಿದರು.